**ದಿನಾಂಕಃ 11-09-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

1. ನಾನು ತುಮ್ಮಿನಕಟ್ಟಿಯ ಹೈಸ್ಕೂಲ್ ನಲ್ಲಿ ಅಟೆಂಡರ್ ಎಂದು ನೌಕರಿ ಮಾಡುತ್ತೇನೆ ಎಂದರೆ ನಿಜ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನಾನು ಈ ಪ್ರಕರಣವನ್ನು ಮಾಹಂತೇಶ ತಿರಕಣ್ಣನವರ ಹಾಗೂ ನಾಗಮ್ಮ ತಿರಕಣ್ಣನವರ ಅವರ ವಿರುದ್ದ ದಾಖಲಿಸಿದ್ದೇನೆ. ಅವರು ನನ್ನ ವಿರುದ್ಧ ದಾಖಲಿಸಿದ್ದ ಅಸಲು ದಾವೆಯ ನಂಬರ್ ಗೊತ್ತಿಲ್ಲ. ಸದರಿ ದಾವೆಯನ್ನು ಕರಬಸಪ್ಪ , ಹಿರಿಯಪ್ಪ ಹಾಗೂ ಪುಟ್ಟಪ್ಪ ನಡೆಸುತ್ತಿದ್ದರು. ತಿರಕಣ್ಣನವರ ವಿರುದ್ಧ ನಾನು ಓ ಎಸ್ ನಂಃ 179/2009 ನೇದ್ದನ್ನು ದಾಖಲಿಸಿದ್ದೆ ಎಂದರೆ ನಿಜ. ಸದರಿ ದಾವೆ ವಜಾ ಆಗಿದೆ ಎಂದರೆ ಸಾಕ್ಷಿಯು ನನಗೆ ಅದರ ಕುರಿತು ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಆದೇಶದ ವಿರುದ್ದ ನಾನು ಆರ್ ಎ ನಂಃ 47/2016 ರಲ್ಲಿ ಅಪೀಲು ಸಲ್ಲಿಸಿದ್ದೆ ಎಂದರೆ ನಿಜ. ಸದರಿ ಅಪೀಲು ಸಹ ವಜಾ ಆಗಿದೆ ಎಂದರೆ ನಿಜ. ಸಾಕ್ಷಿಯು ಮುಂದುವರೆದು ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ತೀರ್ಪಿನ ವಿರುದ್ದ ನಾನು ಮೇಲ್ಮನವಿ ಸಲ್ಲಿಸಿದ್ದೆನೋ ಇಲ್ಲವೋ ನೆನಪಿಲ್ಲ.

2. ಈ ಅಪೀಲನ್ನು ಯಾವ ದಾವೆಯಲ್ಲಿ ಆಗಿರುವ ತೀರ್ಪಿನ ವಿರುದ್ದ ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ದಾವೆಯ ನಂಬರ್ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಒಂದೇ ಆಸ್ತಿಗೆ ಸಂಬಂಧಪಟ್ಟಂತೆ ಓ ಎಸ್ ನಂಃ 179/2009 ಹಾಗೂ ಓ ಎಸ್ ನಂಃ 329/2009 ನೇದ್ದವುಗಳನ್ನು ದಾಖಲಿಸಲಾಗಿತ್ತು ಎಂದರೆ ನಿಜ.

3. ಓ ಎಸ್ ನಂಃ 329/2009 ನೇದ್ದನ್ನು ಮಹಂತೇಶ ಹಾಗೂ ನಾಗಮ್ಮ ಅವರು ನಾಲ್ಕು ಜನರ ವಿರುದ್ದ ದಾಖಲಿಸಿದ್ದರು ಎಂದರೆ ನಿಜ. ನಾವು ನಾಲ್ಕೂ ಜನರೂ ಸದರಿ ದಾವೆಯಲ್ಲಿ

ಒಬ್ಬರೇ ವಕೀಲರನ್ನು ನಿಯೋಜಿಸಿಕೊಂಡಿದ್ದೆವು ಎಂದರೆ ನಿಜ. ಓ ಎಸ್ ನಂಃ 329/2009 ರಲ್ಲಿಯ ತೀರ್ಪಿನ ವಿರುದ್ಧ ಕರಬಸ್ಸಪ್ಪ ಅವರು ಅಪೀಲು ಮಾಡಿದ್ದರು ಎಂದರೆ ಸಾಕ್ಷಿಯು ಅಪೀಲು ಮಾಡಿದ್ದರು ಆದರೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಕರಬಸಪ್ಪ ಅವರು ಸಲ್ಲಿಸಿದ್ದ ಅಪೀಲು 07-12-2012 ರಂದು ವಜಾ ಆಗಿದೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಅದರ ವಿರುದ್ಧ ನೀವು ಅಪೀಲು ಸಲ್ಲಿಸಿಲ್ಲ ಎಂದರೆ ಸಾಕ್ಷಿಯು ತನ್ನ ಮಾವ ಅದರ ಕುರಿತು ನೋಡಿಕೊಳ್ಳುತ್ತಿದ್ದ ಆದ್ದರಿಂದ ನನಗೆ ಗೊತ್ತಾಗಿಲ್ಲ ಎಂದು ನುಡಿಯುತ್ತಾರೆ.

4. ತಾಲೂಕಾ ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯತ್ ದಲ್ಲಿ ನಾವು ಸಲ್ಲಿಸಿದ್ದ ಪ್ರಕರಣಗಳು ವಜಾ ಆಗಿವೆ ಎನ್ನವುದು ನನಗೆ ಗೊತ್ತಿಲ್ಲ. ನಾವು ಮೊದಲು ಸಲ್ಲಿಸಿದ್ದ ಮೇಲ್ಮನವಿಗಳು ವಜಾ ಆಗಿದ್ದು, ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ .

5. ನನ್ನ ಆರೋಗ್ಯ ಚೆನ್ನಾಗಿರಲಿಲ್ಲ ಎಂದು ತೋರಿಸಲು ದಾಖಲೆಗಳನ್ನು ನಮ್ಮ ವಕೀಲರಿಗೆ ನೀಡಿದ್ದೇನೆ.

**ಮುಂದುವರೆದ ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.